ಸಿ ಸಿ ನಂ. 282 /2022 DW1

ಸಾಕ್ಷಿಗೆ ದಿನಾಂಕ 02-11-2022 ರಂದು ಪ್ರಮಾಣ ವಚನ ಭೋದಿಸಲಾಯಿತು.

| | | |
|---|---|---|
| ಹೆಸರು | ಃ | ನಾಗಯ್ಯ |
| ತಂದೆಯ ಹೆಸರು | ಃ | ಕೊಟ್ರಯ್ಯ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ನಂದಿಬೇವೂರು ಗ್ರಾಮ |

ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಬಿ ಎನ್ ವಕೀಲರಿಂದಃ-

ನನಗೆ ಪಿರ್ಯಾದಿಯ ಪರಿಚಯ ಇರುವುದಿಲ್ಲ. ನಾನು ಪಿರ್ಯಾದಿಗೆ ನಿಪಿ-1 ರ ವಿವಾದಿತ ಚೆಕ್ಕನ್ನು ನೀಡಿರುವುದಿಲ್ಲ. ನಿಪಿ-1(ಎ) ನನ್ನ ಸಹಿಯಾಗಿರುವುದಿಲ್ಲ. ನನ್ನ ಹಾಗೂ ಪಿರ್ಯಾದಿಯ ನಡುವೆ ಯಾವುದೇ ವ್ಯವಹಾರವಾಗಿರುವುದಿಲ್ಲ. ನಾನಾಗಲೀ, ನನ್ನ ಮಕ್ಕಳಾಗಲೀ ಇಟ್ಟಿಗಿ ಗ್ರಾಮದಲ್ಲಿ ಯಾವುದೇ ಎಲೆಕ್ಟ್ರಾನಿಕ್ಸ ಅಂಗಡಿಯನ್ನು ಹೊಂದಿರುವುದಿಲ್ಲ. ನಾನು ಪ್ರಸ್ತುತ ನನ್ನ ಕುಟುಂಬವನ್ನು ಪೋಷಿಸಲು ಗುತ್ತಿಯಾಧಾರದ ಮೇಲೆ ವ್ಯವಸಾಯ ವೃತ್ತಿಯನ್ನು ಮಾಡುತ್ತಿದ್ದೇನೆ.

ನನ್ನ ಮಕ್ಕಳು ಚಿಮ್ಮನಹಳ್ಳಿ ಗ್ರಾಮದ ಹಗರಿಬಸವೇಶ್ವರ ದೇವಸ್ಥಾನದಲ್ಲಿ ಅರ್ಚಕರ ಹುದ್ದೆಯನ್ನು ಮಾಡುತ್ತಾರೆ. ನಮ್ಮ ಕುಟುಂಬಕ್ಕೆ ನಾನು ಸಂಪಾದಿಸುವ ವ್ಯವಸಾಯದಿಂದ ಬಂದಂತಹ ಆದಾಯ ಹಾಗೂ ನನ್ನ ಮಗನ ಅರ್ಚಕನ ಹುದ್ದೆಯಿಂದ ಬರುವ ಆದಾಯದಿಂದ ಮಾತ್ರ ಜೀವನ ನಡೆಸಿಕೊಂಡು ಹೋಗುತ್ತಿದ್ದೇವೆ ಇದನ್ನು ಹೊರತುಪಡಿಸಿ ಬೇರೆ ಆದಾಯ ಇಲ್ಲ. ನನಗೆ ಪಿರ್ಯಾದಿಯ ಬಳಿ ಲಕ್ಷಾಂತರ ರೂಪಾಯಿ ಸಾಲ ಮಾಡುವಂತಹ ಅವಶ್ಯಕತೆ ಇರುವುದಿಲ್ಲ. ಲಕ್ಷಾಂತರ ರೂಪಾಯಿ ಸಾಲವನ್ನು ತೀರಿಸುವಂತಹ ಆರ್ಥಿಕ ಸಾಮರ್ಥ್ಯ ನನಗಾಗಲೀ ನನ್ನ ಕುಟುಂಬ ವರ್ಗದವರಿಗಾಗಲೀ ಇರುವುದಿಲ್ಲ. ನನ್ನನ್ನು ಸದರಿ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಿರ್ಯಾದಿ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ